# ಪರ್ಯಾಯ ಶೈಕ್ಷಣಿಕ ಯೋಜನೆ 2021–22

**ತರಗತಿ : 10** **ಮಾಹೆ: ಅಕ್ಟೋಬರ್ – 2021** **ವಿಷಯ: ಪ್ರಥಮ ಭಾಷೆ ಕನ್ನಡ**

| ಕ್ರ.ಸಂ | ತಿಂಗಳು/ ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1. | ಮೊದಲನೆಯ ವಾರ | **ಗದ್ಯಪಾಠ 02: ಲಂಡನ್ ನಗರ**<br>➢ ಪ್ರವಾಸ ಸಾಹಿತ್ಯದ ಪರಿಚಯ ಮಾಡಿಕೊಳ್ಳುವರು.<br>➢ ಕೃತಿಕಾರರಾದ ವಿ. ಕೃ. ಗೋಕಾಕ್ ಅವರ ಪರಿಚಯ ಮಾಡಿಕೊಳ್ಳುವರು.<br>➢ ಲಂಡನ್ ನಗರದ ಸಾರಿಗೆ ವ್ಯವಸ್ಥೆ ಬಗ್ಗೆ, ವೂಲವರ್ಥ ಸ್ಟೇಷನರಿ ಅಂಗಡಿಯ ಬಗ್ಗೆ, ಸ್ಯಾವ್ಹೊಯ್ ಸಿಂಪಿಗಳ ಬಗ್ಗೆ ತಿಳಿಯುವರು.<br>➢ ಇಂಗ್ಲೇಂಡಿನಲ್ಲಿ ಹೆಣ್ಣುಮಕ್ಕಳಿಗೆ ನೀಡುವ ಗೌರವಾದರಗಳ ಬಗ್ಗೆ, ಇಂಡಿಯಾ ಆಫೀಸಿನ ಬಗ್ಗೆ, ಟ್ರಾಫಲ್ಗಾರ್ ಸ್ಕ್ವೇರ್ ಬಗ್ಗೆ ಅರಿಯುವರು.<br>➢ ವೆಸ್ಟ್ ಮಿನಿಸ್ಟರ್ ಅಬೆ ಪ್ರಾರ್ಥನಾ ಮಂದಿರದ ವಿಶೇಷತೆ ಬಗ್ಗೆ ಅರಿಯುವರು. | ➢ ಶಿಕ್ಷಕರು ವಿದ್ಯಾರ್ಥಿಗಳಿಗೆ ಪ್ರವಾಸ ಸಾಹಿತ್ಯದ ಬಗ್ಗೆ ಸಂಕ್ಷಿಪ್ತವಾಗಿ ಹೇಳುವರು.<br>➢ ಸಂದರ್ಶನ ವಿಧಾನದ ಮೂಲಕ ಲೇಖಕರು ವಿ. ಕೃ ಗೋಕಾಕ್ ಅವರ ಪರಿಚಯವನ್ನು ಮಾಡಿಸುವುದು.<br>➢ ನಮ್ಮಲ್ಲಿಯ ಸಾರಿಗೆ ವ್ಯವಸ್ಥೆಯ ಬಗ್ಗೆ ವಿದ್ಯಾರ್ಥಿಗಳಿಂದ ಹೇಳಿಸುವುದು.<br>➢ ವೂಲವರ್ಥ ಸ್ಟೇಷನರಿ ಅಂಗಡಿ ಮತ್ತು ನಮ್ಮಲ್ಲಿರುವ ಅಂಗಡಿಗಳನ್ನು ಹೋಲಿಕೆ ಮಾಡಿ ಸಿಗುವ ವಸ್ತುಗಳ ಬಗ್ಗೆ ಚರ್ಚೆಗೆ ಅವಕಾಶ ಕಲ್ಪಿಸುವುದು.<br>➢ ಇಂಗ್ಲೇಂಡಿನಲ್ಲಿ ಹೆಣ್ಣುಮಕ್ಕಳಿಗೆ ನೀಡುವ ಗೌರವ ಹಾಗೂ ಸಂಸ್ಕೃತಿ ಮತ್ತು ಭಾರತದಲ್ಲಿ ಹೆಣ್ಣು ಮಕ್ಕಳಿಗೆ ನೀಡುತ್ತಿರುವ ಗೌರವ ಮತ್ತು ಸಂಸ್ಕೃತಿಗಳ ಬಗ್ಗೆ ಮಕ್ಕಳಿಗೆ ಚರ್ಚೆಗೆ ಅವಕಾಶ ಕಲ್ಪಿಸುವುದು.<br>➢ ನಮ್ಮ ನಗರಗಳಲ್ಲಿಯ ಸರ್ಕಲ್‌ಗಳಿಗೆ ಇರುವ ಪ್ರಮುಖ ವ್ಯಕ್ತಿಗಳ/ಪ್ರತಿಮೆಗಳ ಹೆಸರುಗಳನ್ನು ಪಟ್ಟಿ ಮಾಡಿಸುವುದು.<br>➢ ವೆಸ್ಟ್ ಮಿನಿಸ್ಟರ್ ಅಬೆ ಪ್ರಾರ್ಥನಾ ಮಂದಿರದಲ್ಲಿನ ಪೊಯೆಟ್ಸ್ ಕಾರ್ನರ್‌ನಲ್ಲಿ ಇರುವ ಕವಿಗಳ ಹೆಸರನ್ನು ಪಟ್ಟಿ ಮಾಡಿಸುವುದು. | ➢ ನೀವು ನೋಡಿರುವ ಪ್ರಮುಖ ಪ್ರವಾಸಿ ಸ್ಥಳಗಳನ್ನು ಪಟ್ಟಿ ಮಾಡಿರಿ.<br>➢ ವಿ. ಕೃ.ಗೋಕಾಕ್ ಅವರ ಕಾವ್ಯನಾಮ ಯಾವುದು ?<br>➢ ವಿ. ಕೃ. ಗೋಕಾಕ್ ಅವರ ಕೃತಿಗಳನ್ನು ಪಟ್ಟಿ ಮಾಡಿರಿ.<br>➢ ಟ್ರಾಮ್ ಬಸ್ಸುಗಳು ಏಕೆ ಸಕಾಲದಲ್ಲಿ ಹೋಗಲಾಗುವುದಿಲ್ಲ?<br>➢ ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು ?<br>➢ ಲಂಡನ್ನಿನ ಹೆಣ್ಣುಮಕ್ಕಳು ಯಾವ ಯಾವ ಕೆಲಸಗಳಲ್ಲಿ ನಿಯುಕ್ತರಾಗಿರುತ್ತಾರೆ ?<br>➢ ಲಂಡನ್ನಿನ ಇಂಡಿಯಾ ಆಫೀಸಿನಲ್ಲಿ ಏನನ್ನು ಕಾಣಬಹುದಾಗಿದೆ ?<br>➢ ನೆಲ್ಸನ್‌ರವರ ಮೂರ್ತಿ ಇರುವ ಸ್ಥಳದ ಹೆಸರೇನು ?<br>➢ ವೆಸ್ಟ್ ಮಿನಿಸ್ಟರ್ ಅಬೆ ಯಾರ ಸ್ಮಾರಕವಾಗಿದೆ ? |

| | | | | |
|---|---|---|---|---|
| | | ➢ ಸ್ಟೋನ್ ಆಫ್ ಸ್ಕೋನ್ ಇದರ ವಿಶೇಷತೆ ಬಗ್ಗೆ ಅರಿಯುವರು.<br>➢ ಕಾಲಗಳು, ಪತ್ರಲೇಖನ ಬಗ್ಗೆ ತಿಳಿಯುವರು. | ➢ ವೆಸ್ಟ್ ಮಿನಿಸ್ಟರ್ ಅಬೆ ಪ್ರಾರ್ಥನಾ ಮಂದಿರದಲ್ಲಿನ ರಾಯಲ್ ಚಾಪೆಲ್‌ನಲ್ಲಿರುವ ರಾಜ–ರಾಣಿಯರ ಹೆಸರುಗಳನ್ನು ಪಟ್ಟಿ ಮಾಡಿ ಬರೆಸುವುದು.<br>➢ ವಿದ್ಯಾರ್ಥಿಗಳಿಗೆ ಕವಿಗಳ/ರಾಜರುಗಳ/ವಿಜ್ಞಾನಿಗಳ ಹೆಸರುಗಳನ್ನು ಬರೆದು ಆಶುಭಾಷಣ ಸ್ಪರ್ಧೆ ಮಾಡುವುದು.<br>➢ ವಿದ್ಯಾರ್ಥಿಗಳಿಗೆ ಕಾಲಗಳು, ಪತ್ರಲೇಖನಗಳ ಬಗ್ಗೆ ಉದಾಹರಣೆ ಸಹಿತ ವಿವರಣೆ ನೀಡುವುದು. | ➢ ವೆಸ್ಟ್ ಮಿನಿಸ್ಟರ್ ಅಬೆ ಬಗ್ಗೆ ಕವಿ ಬ್ಯೂಮಾಂಟ್ ಏನು ಹೇಳಿದ್ದಾರೆ?<br>➢ ಲಂಡನ್‌ನಲ್ಲಿ ಸಾಮ್ರಾಟರ ರಾಜ್ಯಾಭಿಷೇಕವಾಗುವಾಗ ಅನುಸರಿಸುವ ವಿಶೇಷತೆಯೇನು?<br>➢ ಅಭ್ಯಾಸ ಹಾಳೆ 1 ಮತ್ತು 2 |
| 2 | ಮೂರನೆಯ ವಾರ/ನಾಲ್ಕನೆಯ ವಾರ | **ಪದ್ಯ ಪಾಠ: 02**<br>**ಹಲಗಲಿ ಬೇಡರು**<br>➢ ಲಾವಣಿ/ವೀರಗೀತೆ ಬಗ್ಗೆ ಪರಿಚಯವನ್ನು ಮಾಡಿಕೊಳ್ಳುವರು. | ➢ ಲಾವಣಿ/ವೀರಗೀತೆಯ ಲಕ್ಷಣಗಳನ್ನು ತಿಳಿಸಿ ಮಕ್ಕಳಿಂದ ಪಟ್ಟಿ ಮಾಡಿಸುವುದು. ಯೂ–ಟ್ಯೂಬ್ ಲಿಂಕನ್ನು ಬಳಸಿಕೊಂಡು ಲಾವಣಿಗಳನ್ನು ಪರಿಚಯಿಸುವುದು. ಧ್ವನಿ ಮುದ್ರಣದ ಸಹಾಯದಿಂದ ಪದ್ಯವನ್ನು ಕೇಳಿಸುವುದು. ಸಾಧ್ಯವಾದಲ್ಲಿ ಶಿಕ್ಷಕರೇ ಹಾಡುವುದು / ಹಾಡಿಸುವುದು. | ➢ ವೀರಗೀತೆಗಳು ಎಂದರೇನು ?<br>➢ ನಿಮಗೆ ತಿಳಿದಿರುವ ಐದು ಲಾವಣಿಗಳ ಹೆಸರುಗಳನ್ನು ಬರೆಯಿರಿ. |
| | | ➢ ಪದ್ಯದ ಆಶಯ ಭಾವವನ್ನು ತಿಳಿಯುವರು. | ➢ ವಿದ್ಯಾರ್ಥಿಗಳಿಗೆ ಪದ್ಯದ ಆಶಯ ಭಾವವನ್ನು ತಿಳಿಸುವುದು. | ➢ ಹಲಗಲಿ ಗ್ರಾಮ ಎಲ್ಲಿದೆ ? |
| | | ➢ ಹಲಗಲಿ ಬಂಟರ ಹಿನ್ನೆಲೆ ತಿಳಿಯುವರು.<br>➢ ಹೊಸ ಪದಗಳ ಅರ್ಥವನ್ನು ತಿಳಿಯುವರು. | ➢ ಹಲಗಲಿ ಬಂಟರ ಪೂರ್ವಕಥೆಯನ್ನು ಮಕ್ಕಳಿಂದ ಹೇಳಿಸುವುದು.<br>➢ ಹೊಸಪದಗಳ ಅರ್ಥವನ್ನು ಪಟ್ಟಿ ಮಾಡಿಸುವುದು.<br>➢ ಪಟ್ಟಿ ಮಾಡಿದ ಹೊಸ ಪದಗಳನ್ನು ಸ್ವಂತವಾಕ್ಯದಲ್ಲಿ ಪ್ರಯೋಗಿಸುವುದು. | ➢ ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ ?<br>➢ ಕುಂಪಣಿ ಸರ್ಕಾರ ಹೊರಡಿಸಿದ ಆದೇಶವೇನು ? |
| | | ➢ ಹಲಗಲಿಯ ಮೇಲೆ ಬ್ರಿಟೀಷರ ದೌರ್ಜನ್ಯದ ಬಗ್ಗೆ ಅರಿಯುವರು. | ➢ ಪದ್ಯದ ಸಾಲುಗಳನ್ನು ಹೇಳಿಸುತ್ತಾ ಪದ್ಯದ ಚರಣಗಳನ್ನು ಸಾರಾಂಶೀಕರಿಸುವುದು. | ➢ ಹಲಗಲಿಯ ನಾಲ್ವರು ಪ್ರಮುಖರು ಯಾರು ?<br>➢ ಹಲಗಲಿಯ ಗುರುತು |

| | | | | |
|---|---|---|---|---|
| | | ➢ ಹಲಗಲಿ ಬೇಡರು ಬ್ರಿಟೀಷರ ವಿರುದ್ಧ ಹೋರಾಡಿ ಹತರಾದ ಬಗ್ಗೆ ತಿಳಿಯುವರು. | ➢ ಇಡೀ ಪದ್ಯದ ಚರಣಗಳ ಸಾರಾಂಶವನ್ನು ವಿದ್ಯಾರ್ಥಿಗಳಿಂದ ಬರೆಸುವುದು.<br>➢ ಮಕ್ಕಳಿಂದ ಹಲಗಲಿ ಬೇಡರು ಲಾವಣಿಯನ್ನು ನಾಟಕ ರೂಪದ ಸಂಭಾಷಣೆಯಲ್ಲಿ ರಚಿಸಿ ನಾಟಕಾಭಿನಯ ಮಾಡಿಸುವುದು. | ಉಳಿಯದಂತಾದುದು ಏಕೆ ?<br>➢ ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು ? |
| | | **ವ್ಯಾಕರಣಾಂಶ:**<br>➢ **ತತ್ಸಮ**–ತದ್ಭವ | ➢ ವಿದ್ಯಾರ್ಥಿಗಳಿಂದ ತತ್ಸಮ–ತದ್ಭವ ಪದಗಳನ್ನು ಪಟ್ಟಿ ಮಾಡಿಸುವುದು. | ➢ ತತ್ಸಮ– ತದ್ಭವಗಳ ಪದಗಳನ್ನು ಪಟ್ಟಿ ಮಾಡಿ |
| | | **ವ್ಯಾಕರಣಾಂಶ:**<br>➢ ಅನ್ಯ ದೇಶಿಯ ಪದಗಳು | ➢ ವಿದ್ಯಾರ್ಥಿಗಳಿಗೆ ಅನ್ಯ ದೇಶಿಯ ಪದಗಳ ಬಗ್ಗೆ ಉದಾಹರಣೆಸಹಿತ ತಿಳಿಸುವುದು. | ➢ ಅಭ್ಯಾಸ ಹಾಳೆ 3 ಮತ್ತು 4 |

**ಲಂಡನ್ ನಗರ ಪಾಠದ ಸಂವೇದ ಕ್ಲಾಸ್ ವೀಕ್ಷಣೆಗಾಗಿ ಈ ಲಿಂಕ್ ಬಳಸಿ:**

**https://www.youtube.com/watch?v=9W6MKqDMr64**

**ಹಲಗಲಿ ಬೇಡರು ಪದ್ಯದ ಸಂವೇದ ಕ್ಲಾಸ್ ವೀಕ್ಷಣೆಗಾಗಿ ಈ ಲಿಂಕ್ ಬಳಸಿ:**

**ಭಾಗ –1**

**https://www.youtube.com/watch?v=AsYt7v45ZBE**

**ಭಾಗ–2**

**https://www.youtube.com/watch?v=2w-2_lW-2dM**

## ಗದ್ಯಭಾಗ~03 ಲಂಡನ್ ನಗರ ಅಭ್ಯಾಸ ಹಾಳೆ–01

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1) ನೆಲ್ಸನ್ ರವರ ಮೂರ್ತಿಯಿರುವ ಸ್ಥಳದ ಹೆಸರೇನು?

_______________________________________________

2) ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿಯ ಹೆಸರೇನು ?

_______________________________________________

3) ಲಂಡನ್ ನಲ್ಲಿರುವ ಸರ್ಕಾರಿ ವೈದಿಕರ ಕೆಲಸವೇನು?

_______________________________________________

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು/ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

4) ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳು ಯಾವುವು ?

_______________________________________________

_______________________________________________

_______________________________________________

5) ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ವರ್ಣಿಸಿದ್ದಾರೆ?

_______________________________________________

_______________________________________________

_______________________________________________

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿರಿ.**

6) "ಹೊತ್ತು! ಹೊತ್ತು! ಹೊತ್ತೇ ಹಣ "

_______________________________________________

_______________________________________________

_______________________________________________

_______________________________________________

_______________________________________________

_______________________________________________

**ಈ) ಈ ಕೆಳಗಿನ ಲೇಖಕರ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಯಿರಿ.**

7) ವಿ.ಕೃ.ಗೋಕಾಕ್

_______________________________________________

_______________________________________________

_______________________________________________

_______________________________________________

_______________________________________________

## ಗದ್ಯಭಾಗ~03 ಲಂಡನ್ ನಗರ – (ವ್ಯಾಕರಣಾಂಶ) ಅಭ್ಯಾಸ ಹಾಳೆ–02

*************************************************************************************

**ಅ) ಬಿಟ್ಟ ಸ್ಥಳವನ್ನು ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.**

1. **'ಒಮ್ಮೊಮ್ಮೆ'** ಪದವು ಈ ಸಂಧಿಗೆ ಉದಾಹರಣೆಯಾಗಿದೆ.

ಅ) ಆಗಮಸಂಧಿ ಆ) ಆದೇಶ ಸಂಧಿ ಇ)ಲೋಪಸಂಧಿ ಈ) ಗುಣ ಸಂಧಿ ಉತ್ತರ:– ________________

2. **'ಅತ್ಯಾದರ'** ಈ ಪದವನ್ನು ಬಿಡಿಸಿ ಬರೆದಾಗ

ಅ) ಅತ್ಯಾ+ಆದರ ಆ) ಅತಿ+ ಆದರ ಇ) ಅತ್ಯಾ +ಅದರ ಈ) ಅತಿ+ಅದರ ಉತ್ತರ:– ________________

3. 'ಪುಚ್ಛ' ಪದದ ಅರ್ಥ.

ಅ) ಗರಿ ಆ) ಗುಚ್ಛ ಇ) ಗುಂಡಿ ಈ) ಬನ್ನ ಉತ್ತರ:– ________________

**ಆ) ಮೊದಲೆಡರು ಪದಗಳಿಗಿರುವ ಸಂಬಂಧದಂತೆ ಮೂರನೇ ಪದಕ್ಕೆ ಸರಿಹೊಂದುವ ಪದವನ್ನು ಬರೆಯಿರಿ.**

4. ನೋಡುವನು : ಭವಿಷ್ಯತ್ ಕಾಲ : : ಓದುತ್ತಾಳೆ : ____________

5. ಪುಸ್ತಕ : ಹೊತ್ತಿಗೆ : : ಕವಿ : ____________

6. ನಾನು : ಉತ್ತಮ ಪುರುಷ : : ನೀನು : ____________

**ಇ) ಕೊಟ್ಟಿರುವ ಪದಗಳನ್ನು ಬಳಸಿ ವಾಕ್ಯ ರಚಿಸಿ.**

7.ಪ್ರವಾಸ:– ________________________________________________

________________________________________________

8. ಪ್ರಾರ್ಥನೆ :– ________________________________________________

________________________________________________

9. ಚಮತ್ಕಾರ :– ________________________________________________

________________________________________________

**ಈ) ಕೊಟ್ಟಿರುವ ಹೇಳಿಕೆಗಳನ್ನು ಸೂಚನೆಯಂತೆ ಬರೆಯಿರಿ.**

11. ನಾನು ಪ್ರವಾಸಕ್ಕೆ ಹೋಗುತ್ತೇನೆ. (ಈ ವಾಕ್ಯವನ್ನು ಭೂತಕಾಲಕ್ಕೆ ಪರಿವರ್ತಿಸಿ ಬರೆಯಿರಿ.)

ಉತ್ತರ:– ________________________________________________

12. ನನ್ನ ಸ್ನೇಹಿತ ನನಗೆ ಉಪಕಾರ ಮಾಡುವನು. (ಈ ವಾಕ್ಯವನ್ನು ವರ್ತಮಾನ ಕಾಲಕ್ಕೆ ಪರಿವರ್ತಿಸಿ ಬರೆಯಿರಿ.)

ಉತ್ತರ:– ________________________________________________

13. ಅವನು ಪ್ರತಿನಿತ್ಯ ಪಾಠವನ್ನು ಓದುತ್ತಾನೆ. (ಈ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿ ಬರೆಯಿರಿ.)

ಉತ್ತರ:– ________________________________________________

**ಉ) ಪತ್ರಲೇಖನ:–**

ನಿಮ್ಮ ಊರಿನ ರಸ್ತೆಯನ್ನು ಸರಿಪಡಿಸುವಂತೆ ಕೋರಿ ನಗರ ಸಭಾ ಅಧ್ಯಕ್ಷರಿಗೆ ಪತ್ರ ಬರೆಯಿರಿ.
(ಪ್ರತ್ಯೇಕ ಹಾಳೆಯನ್ನು ಬಳಸುವುದು,)

# ಪದ್ಯಭಾಗ – 03 ಹಲಗಲಿ ಬೇಡರು ಅಭ್ಯಾಸ ಹಾಳೆ–1

**************************************************************************************

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1) ಕುಂಪಣಿ ಸರ್ಕಾರ ಹೊರಡಿಸಿದ ಆದೇಶ ಏನು?

______________________________________________

2) ಹಲಗಲಿಯ ನಾಲ್ವರು ಪ್ರಮುಖರು ಯಾರು?

______________________________________________

3) ಹಲಗಲಿಯ ಗುರುತು ಸಿಗದಂತಾದುದು ಏಕೆ?

------------------------------------------------------------

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು/ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1) ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?

______________________________________________

______________________________________________

______________________________________________

______________________________________________

2. ಹಲಗಲಿಗೆ ದಂಡು ಬರಲು ಕಾರಣವೇನು?

______________________________________________

______________________________________________

______________________________________________

______________________________________________

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿರಿ.**

1) "ಜೀವ ಸತ್ತುಹೋಗುವುದು ಗೊತ್ತ"

______________________________________________

______________________________________________

______________________________________________

______________________________________________

**ಉ) ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ.**

6) ಕೊಡಲಿ ಕೋರೆ______________________________

______________________________

______________________________

______________________________ ಹೇಳಲಿ ನಾನೆಷ್ಟಾ

# ಪದ್ಯಭಾಗ~03 ಹಲಗಲಿ ಬೇಡರು (ವ್ಯಾಕರಣ) ಅಭ್ಯಾಸ ಹಾಳೆ–2

**ಅ) ಕೊಟ್ಟಿರುವ ಪದಗಳಿಗೆ ತದ್ಭವ ರೂಪ ಬರೆಯಿರಿ**

1. ದ್ಯೂತ = ____________ 2. ಕಲಶ = ____________ 3. ವಂದ್ಯಾ = ____________

4. ಕುಠಾರ = ____________ 5. ವೈಶಾಖ = ____________ 6. ಅರ್ಕ = ____________

**ಆ). ಹೊಂದಿಸಿ ಬರೆಯಿರಿ.**

| | "ಅ" | "ಆ" | ಉತ್ತರ |
|---|---|---|---|
| 01 | ದಲ್ಲಾಳಿ | ಉರ್ದು | |
| 02 | ತರಬೇತು | ಹಿಂದೂಸ್ಥಾನಿ | |
| 03 | ಸಾಬೂನು | ಪಾರ್ಸಿ | |
| 04 | ಅಹವಾಲು | ಅರಬ್ಬಿ | |
| 05 | ಕಾರ್ಖಾನೆ | ಪೋರ್ಚುಗೀಸ್ | |

**ಇ) ಕೊಟ್ಟಿರುವ ಗ್ರಾಮ್ಯ ಪದಗಳಿಗೆ ಗ್ರಾಂಥಿಕ ಪದಗಳನ್ನು ಬರೆಯಿರಿ.**

| | | | |
|---|---|---|---|
| ಬ್ಯಾಡರೆಲ್ಲ | | ಕೊಡುತಿವಿ | |
| ಹಿಂಗ | | ಕಳುವ್ಯಾರೆ | |
| ಮ್ಯಾಗ | | ಇಸವಾಸ | |
| ಹ್ವಾಂಗ | | ಸಕ್ಕಾರಿ | |
| ದಡಕ | | ಹಾಕ್ಕೊಂಡು | |

**ಈ) ಹಲಗಲಿ ಬೇಡರು ಪದ್ಯದಲ್ಲಿ ಬಂದಿರುವ ಹತ್ತು ಪ್ರಾಸಪದಗಳನ್ನು ಪಟ್ಟಿ ಮಾಡಿರಿ.**

1
2
3
4
5
6
7
8
9
10

**ಉ) ಅಲಂಕಾರವನ್ನು ಹೆಸರಿಸಿ ಸಮನ್ವಯಗೊಳಿಸಿ.**

ಒಳಗಿನ ಮಂದಿ ಗುಂಡುಹೊಡೆದರೊ ಮುಂಗಾರಿ ಸಿಡಿಲಸಿಡಿದ್ಹಾಂಗ

______________________________

______________________________

______________________________

______________________________